<u>ಸಾಕ್ಷಿಯನ್ನು ದಿನಾಂಕ 25-11-2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>

**<u>ಮುಂದುವರಿದ ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಎಸ್.ಭಟ್ಟರವರಿಂದಃ</u>**

ಆರೋಪಿಗೆ ನಾನು ವಕೀಲರ ಮೂಲಕ ನೋಟಿಸ್ ನೀಡಿದ್ದೆ. ಸದರಿ ನೋಟಿಸನ್ನು ನಾನು ಓದಿ ನೋಡಿದ್ದೇನೆ. ಸದರಿ ನೋಟಿಸನಲ್ಲಿ ಇರುವ ಎಲ್ಲಾ ಅಂಶಗಳು ನಿಜವಿರುತ್ತದೆ. ಆರೋಪಿ ಮರು ಉತ್ತರ ನೀಡಿದ್ದಾರೋ ಇಲ್ಲವೋ ನನಗೆ ನೆನಪಿಲ್ಲ. ನಾನು ಆರೋಪಿಗೆ ರೂ.6,50,000/- ಹಣವನ್ನು ಒಂದೇ ಸಲ ಕೊಟ್ಟಿಲ್ಲ, ಮೂರು ಬಾರಿ ಕೊಟ್ಟಿರುತ್ತೇನೆ. ಜನವರಿ 2022 ರಲ್ಲಿ ಮೊದಲನೇಯ ಬಾರಿ ರೂ.1,00,000/- ಆರೋಪಿಗೆ ಕೊಟ್ಟಿದ್ದೆ. ಅದು ಆದ 7-8 ದಿನಗಳ ನಂತರ ಎರಡನೇಯ ಬಾರಿ ಆರೋಪಿಗೆ ರೂ.2,00,000/- ಕೊಟ್ಟಿದ್ದೆ. ಉಳಿದ ಹಣವನ್ನು ಅದೇ ತಿಂಗಳಿನಲ್ಲೇ ಆರೋಪಿಗೆ ಕೊಟ್ಟಿದ್ದೆ. ಮೂರು ಬಾರಿ ಹಣ ಕೊಟ್ಟಾಗಲೂ ನಾನು ಆತನಿಂದ ಲಿಖಿತವಾಗಿ ಯಾವುದೇ ದಾಖಲೆಯನ್ನು ಬರೆಸಿಕೊಂಡಿಲ್ಲ. ಹಣ ಕೊಡುವಾಗ ನಮ್ಮಿಬ್ಬರ ಮಧ್ಯ ಬೇರೆ ಯಾರು ಇರಲಿಲ್ಲ. ನಾನು ಹಣ ಕೊಟ್ಟ ಬಗ್ಗೆ ಒಂದು ಪುಸ್ತಕದಲ್ಲಿ ಬರೆದುಕೊಂಡಿದ್ದೇನೆ, ಅದಕ್ಕೆ ಆರೋಪಿ ಸಹಿ ತೆಗೆದುಕೊಂಡಿಲ್ಲ. ನಾನು ಬ್ಯಾಂಕ್ ಆಫ್ ಬರೋಡಾದಲ್ಲಿ ವ್ಯವಹಾರ ಮಾಡಿಕೊಂಡಿದ್ದೇನೆ. ಅದರ ಜೊತೆಯಲ್ಲಿ ಹೊನ್ನಾವರದ ಅರ್ಬನ್ ಬ್ಯಾಂಕಿನಲ್ಲಿಯೂ ಸಹ ಖಾತೆ ಇದೆ. ಅದು ಸಾಲದ ಖಾತೆಯಾಗಿದ್ದು, ರೂ.10,00,000/- ಹಣವನ್ನು ಸಾಲ ಮಾಡಿದ್ದೆ. ಜನವರಿ 2022 ರಲ್ಲಿ ಆರೋಪಿಗೆ ಕೊಟ್ಟ ಹಣ ನನ್ನ ಖಾತೆಯಲ್ಲಿ ಇತ್ತು. ಅಸಲು ಮತ್ತು ಬಡ್ಡಿ ಸೇರಿ ಪ್ರತಿ ತಿಂಗಳು ರೂ.15,750/- EMI ಬರುತ್ತದೆ. ನಾನು ಜನವರಿ 2022 ರಲ್ಲಿ ಅರ್ಬನ್ ಬ್ಯಾಂಕಿನಲ್ಲಿ ಸಾಲ ಮಾಡಿದ್ದೆ. ಸದರಿ ಸಾಲವನ್ನು ನಾನು ಜಮೀನು ಖರೀದಿಸುವ ಉದ್ದೇಶಕ್ಕಾಗಿ ಮಾಡಿದ್ದೆ. ಜಮೀನುಕೊಳ್ಳಲು ಬ್ಯಾಂಕಿನಲ್ಲಿ ಸಾಲ ಮಾಡಿದರೆ ಸಾಲದ ಹಣವನ್ನು ನೇರವಾಗಿ ಜಮೀನಿನ ಮಾಲೀಕರಿಗೆ ನೀಡಲಾಗುತ್ತದೆ ಅಂದರೆ ನಾನು ನನ್ನ ಜಮೀನನ್ನು ಆಧಾರ ಮಾಡಿ ಸಾಲ ಮಾಡಿದ್ದೆ. ನಾನು ದುಗ್ಗೂರನಲ್ಲಿದ್ದ ಯಾವುದೇ ಉತ್ಪನ್ನ ಇಲ್ಲದೇ ಇರುವ ಜಮೀನನ್ನು ಆಧಾರ ಮಾಡಿ ಎರಡು ಜನ ಜಾಮೀನುದಾರರನ್ನು ಕೊಟ್ಟು ಸದರಿ ಸಾಲ ಮಾಡಿದ್ದೆ.

ನಾನು ಆರೋಪಿಗೆ ಕೊಟ್ಟ ಹಣಕ್ಕೆ ಯಾವುದೇ ಬಡ್ಡಿ ಇರಲಿಲ್ಲ, ನಾನು ವಿಶ್ವಾಸದಲ್ಲಿ ಕೊಟ್ಟಿದ್ದೆ. ಆರೋಪಿಗೆ ಅಂಕೋಲದಲ್ಲಿ ಜಮೀನು ಮತ್ತು ಮನೆ ಇದೆ. ನಾನು ಹಣ ಕೊಡುವ ಕಾಲಕ್ಕೆ ಆತನ ಹೆಸರಿನಲ್ಲಿ ಯಾವುದಾರರೂ ಜಮೀನು ಅಥವಾ ಮನೆ ಇತ್ತೊ ಇಲ್ಲವೋ ನಾನು ವಿಚಾರಿಸಿಲ್ಲ. ಕಳೆದ 5-6 ವರ್ಷಗಳಿಂದ ಆರೋಪಿಗೆ ನನಗೆ ಗೊತ್ತು. ಆರೋಪಿ ದೇವಸ್ಥಾನಕ್ಕೆ ಹೂವು ಮತ್ತು ಹಣ್ಣನ್ನು ಹೊನ್ನಾವರದಲ್ಲಿ ತರಿಸುವ ಕಾಲಕ್ಕೆ ನನ್ನ ಮೂಲಕ ತರಿಸುತ್ತಿದ್ದರು ಎಂದರೆ ಸರಿಯಲ್ಲ. ಹೂವು ಹಣ್ಣು ತರಿಸಿಕೊಳ್ಳಲು ಪದೇ ಪದೇ ಹಣ ಕೊಡುವುದನ್ನು ತಪ್ಪಿಸಿಕೊಳ್ಳಲು ನಾನು ಆರೋಪಿಯಿಂದ ಎರಡು ಖಾಲಿ ಚೆಕ್ಕನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯಿಂದ ನಾನು ತೆಗೆದುಕೊಂಡಿದ್ದ

ಖಾಲಿ ಚೆಕ್ಕುಗಳ ಮೇಲೆ ನನಗೆ ಇಷ್ಟವಾದ ಹಣವನ್ನು ಬರೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಬ್ಯಾಂಕಿನಿಂದ ಸಾಲ ತೆಗೆದುಕೊಂಡಿದ್ದು, ನಾನು ಆರೋಪಿಗೆ ರೂ.6,50,000/- ಲಕ್ಷ ಹಣ ಕೊಡುವ ಸಾಮರ್ಥ್ಯವೇ ನನಗೆ ಇಲ್ಲ ಎಂದರೆ ಸರಿಯಲ್ಲ. ದಾಖಲೆ ಇಲ್ಲದೇ ರೂ.6,50,000/- ಹಣವನ್ನು ಆರೋಪಿಗೆ ಕೊಟ್ಟಿದ್ದೇನೆ ಅಂತಾ ಶುದ್ಧ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆದಾಯ ತೆರಿಗೆಯ ಪಾವತಿದಾರ. ಪ್ರತಿ ವರ್ಷ ಎಷ್ಟು ತೆರಿಗೆ ಕಟ್ಟುತ್ತೇನೆ ಎನ್ನುವುದು ನನಗೆ ನೆನಪಿಲ್ಲ. ಕಳೆದ 7 ವರ್ಷಗಳಿಂದ ತೆರಿಗೆ ಕಟ್ಟುತ್ತಿದ್ದೇನೆ. ಜನವರಿ 2022 ರಲ್ಲಿ ನನ್ನ ಬಳಿ ರೂ.6,50,000/- ಹಣ ಇದ್ದ ಬಗ್ಗೆ ತೆರಿಗೆಯಲ್ಲಿ ಘೋಷಣೆ ಮಾಡಿಲ್ಲ, ಏಕೆಂದರೆ ಅದು ಸಾಲದ ಹಣ. ಅರ್ಬನ್ ಬ್ಯಾಂಕಿನಲ್ಲಿ ಸಾಲ ತೆಗೆದುಕೊಂಡ ಬಗ್ಗೆ ಆದಾಯ ತೆರಿಗೆ Returns ನಲ್ಲಿ ತೋರಿಸಿದ್ದೀರಾ ಅಂದರೆ ಅದು ನನಗೆ ಗೊತ್ತಿಲ್ಲ. ರೂ.2,00,000/- ಮೇಲ್ಪಟ್ಟು ಯಾವುದೇ ನಗದು ಹಣದ ವ್ಯವಹಾರ ಮಾಡುವಂತಿಲ್ಲ ಅಂದರೆ ನನಗೆ ಗೊತ್ತಿಲ್ಲ. ಬ್ಯಾಂಕಿನಲ್ಲಿ ಸಾಲ ಮಾಡಿ ಆರೋಪಿಗೆ ಹಣ ಕೊಟ್ಟಿದೇನೆ ಅಂತಾ ನಾನು ನನ್ನ ವಕೀಲರಿಗೆ ಹೇಳಿದ್ದೇನೆ, ಆದರೆ ಈ ಬಗ್ಗೆ ವಕೀಲರಿಗೆ ನಾನು ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ. ಸಾಲ ಮಾಡಿರುವ ದಾಖಲೆಗಳನ್ನು ಹಾಜರು ಪಡಿಸಲು ನನಗೆ ಏನು ತೊಂದರೆ ಇಲ್ಲ. ನಾನು ಯಾವುದೇ ರೀತಿ ಸಾಲ ಮಾಡಿ ಆರೋಪಿಗೆ ಕೊಟ್ಟಿಲ್ಲವಾದ್ದರಿಂದಲೇ ನಾನು ದಾಖಲೆಯನ್ನು ಹಾಜರು ಪಡಿಸುತ್ತಿಲ್ಲ ಎಂದರೆ ಸರಿಯಲ್ಲ. ನನಗೆ ಮೊದಲು ಬಿ.ಪಿ.ಎಲ್ ಕಾರ್ಡ ಇತ್ತು, ಈಗ ಕಾರು ಇರುವುದರಿಂದ ಎ.ಪಿ.ಎಲ್ ಕಾರ್ಡ ಆಗಿದೆ. ಸುಮಾರು 2-3 ವರ್ಷಗಳ ಕಾಲ ಬಿ.ಪಿ.ಎಲ್ ಕಾರ್ಡ ಬಳಸಿದ್ದೆ. ಬಿ.ಪಿ.ಎಲ್ ರದ್ದಾದ ಎಷ್ಟು ವರ್ಷಗಳ ನಂತರ ಆರೋಪಿಗೆ ಹಣ ಕೊಟ್ಟಿದ್ದೇನೆ ಎಂದು ನಿಖರವಾಗಿ ಹೇಳಾಗುವುದಿಲ್ಲ. ಅರ್ಬನ್ ಬ್ಯಾಂಕಿನಿಂದ ಆರೋಪಿಗೆ ಹಣ ಕೊಡಲು ಅರ್ಬನ್ ಬ್ಯಾಂಕಿನಿಂದ ಹಣ ಹಿಂಪಡೆದ ಬಗ್ಗೆ ಪಾಸ್ ಬುಕ್ ನಲ್ಲಿ ನಮೂದು ಇರಬಹುದು, ಆದರೆ ಪಾಸ್ ಬುಕನ್ನು ಹಾಜರು ಪಡಿಸಿಲ್ಲ.

ಆರೋಪಿ ನನ್ನ ವಿರುದ್ಧ 07-03-2021ರಂದು ಪೋಲಿಸ್ ಠಾಣೆಯಲ್ಲಿ ದೂರು ನೀಡಿದ್ದ ಎಂದರೆ ಸರಿಯಲ್ಲ. ಆರೋಪಿ ಸದರಿ ದಿನ ನಾನು ಆತನಿಗೆ ಬೈದು ಮೊಬೈಲ್ ಕಸಿದುಕೊಂಡಿದ್ದೇನೆ ಅಂತಾ ದೂರು ನೀಡಿದ್ದರು ಎಂದರೆ ಸರಿಯಲ್ಲ. ಪೋಲಿಸರು ನನ್ನನ್ನು ಠಾಣೆಗೆ ಕರೆಸಿದ್ದರು. ನಾನು ಈ ಕೇಸು ದಾಖಲಾದ ನಂತರ ಪೋಲಿಸರು ಠಾಣೆಗೆ ಕರೆಸಿದ್ದರು. ನಿಪಿ-3 ರ ನೋಟಿಸ್ ನೀಡುವ ಮೊದಲು ನಾನು ಆರೋಪಿಗೆ ಮೌಖಿಕವಾಗಿ ಕೇಳಿದ್ದೇನೆ, ಲಿಖಿತವಾಗಿ ಕೇಳಿಲ್ಲ. ನಾನು ಕೊಟ್ಟಿದ್ದ ಹಣವನ್ನು ವಾಪಸ್ಸು ಕೊಡುವಂತೆ ಕೇಳಿದ್ದೇನೆ. ಆರೋಪಿ ನನ್ನ ಬಳಿ ಯಾವುದೇ ಹಣ ತೆಗೆದುಕೊಂಡಿಲ್ಲ, ನಾನು ರೂ.6,50,000/- ಹಣವನ್ನು ನಾನು ಯಾವತ್ತೂ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಹೂವಿನ ಮತ್ತು ಹಣ್ಣಿನ ಬಾಬ್ತು 65-70 ಸಾವಿರ ರೂಪಾಯಿ ಹಣವನ್ನು ಕೊಡಬೇಕಾಗಿದ್ದು, ಇದೇ ಅಂಶವನ್ನು ಆರೋಪಿ ಮರು ಉತ್ತರದಲ್ಲಿ ತಿಳಿಸಿದ್ದಾರೆ ಅದು ಸುಳ್ಳು. ನನಗೂ ಆರೋಪಿಗೂ ಬಹಳ ವಿಶ್ವಾಸ ಇತ್ತು. ಆರೋಪಿಯ ಮನೆ 35-40 ಕಿಲೋ ಮೀಟರ್ ದೂರ ಎಂದರೆ ಸರಿ. ಆರೋಪಿ ಮೊದಲು Security Guard ಆಗಿದ್ದರು, ಕಳೆದ 4 ವರ್ಷಗಳಿಂದ ಪೂಜರಿಯಾಗಿ ಕೆಲಸ ಮಾಡುತ್ತಿದ್ದಾರೆ. ಆರೋಪಿ ನನ್ನ ಬಳಿ ಹೂವು ಮತ್ತು ಹಣ್ಣನ್ನು ತರಿಸಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಾನು

**PW**-1

ನೋಟಿಸಿನಲ್ಲಿ ಹೇಳಿರುವಂತೆ ನಾನು ಆರೋಪಿಗೆ ಯಾವುದೇ ಹಣವನ್ನು ಕೊಟ್ಟಿಲ್ಲ ಮತ್ತು ಆತ ಯಾವುದೇ ಹಣ ಕೊಡಲು ಬಾದಸ್ಥರಲ್ಲ ಎಂದರೆ ಸರಿಯಲ್ಲ. ರೂ.6,50,000/- ಹಣ ಕೊಡುವ ಯಾವುದೇ ಸಾಮರ್ಥ್ಯ ನನ್ನ ಬಳಿ ಇರಲಿಲ್ಲ. ನಾನು ಸದರಿ ಮೊತ್ತವನ್ನು ಆರೋಪಿಗೆ ಕೊಡಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಭದ್ರತೆಯಾಗಿ ಕೊಟ್ಟಿದ್ದ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**